**VIJAYANAGARA SRI KRISHNADEVARAYA UNIVERSITY**

**JNANASAGARA CAMPUS, BALLARI – 583 105**

**ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ**

**ಜ್ಞಾನಸಾಗರ, ಬಳ್ಳಾರಿ – 583 105**

# Department of Studies in Kannada

## ಎಂ.ಎ ಕನ್ನಡ ಅಧ್ಯಯನ ವಿಭಾಗ

# SYLLABUS

**MASTER OF ARTS**
**(I to IV Semester)**

**With effect from**
**2021-22**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನಸಾಗರ, ಬಳ್ಳಾರಿ – 583 105

# ಎಂ.ಎ ಕನ್ನಡ ಅಧ್ಯಯನ ವಿಭಾಗ

## Programme Outcomes (POs):

**At the end of the programme students will be able to:**

**PO 1:** ಈ ಪದವಿಯ ಪಠ್ಯಗಳ ಅಧ್ಯಯನದಿಂದ ಕನ್ನಡ ನಾಡು – ನುಡಿ ಸಂಸ್ಕೃತಿ ಇತ್ಯಾದಿಗಳ ಬಗೆಗೆ ಅಭಿಮಾನ ಮೂಡಿಸುತ್ತದೆ.

**PO 2:** ಈ ಪಠ್ಯಗಳ ಅಧ್ಯಯನದಿಂದ ವಿದ್ಯಾರ್ಥಿಗಳು ಸೃಜನಶೀಲ ಮತ್ತು ವಿಮರ್ಶಾ ಚಿಂತಕರನ್ನಾಗಿಸುತ್ತದೆ.

**PO 3:** ಈ ಸ್ನಾತಕೋತ್ತರ ಪದವಿಯ ಅಧ್ಯಯನದಿಂದ ಕನ್ನಡ ನಾಡಿನಲ್ಲಿ ಪ್ರಖ್ಯಾತಗೊಂಡ ವಿವಿಧ ಧರ್ಮಗಳ ತಾತ್ವಿಕತೆ ಹಾಗೂ ಆ ಧರ್ಮದೊಳಗಿನ ವಿವಿಧ ಬಗೆಯ ಸಂಘರ್ಷಗಳನ್ನು ಅರಿತುಕೊಳ್ಳಲು ಸಹಕಾರಿಯಾಗಿದೆ.

**PO 4:** ಈ ಪದವಿಯಿಂದ ವಿದ್ಯಾರ್ಥಿಗಳ ಭಾಷಾ ಕೌಶಲ (ಆಲಿಸುವ, ಮಾತನಾಡುವ, ಓದುವ, ಬರಹ ) ಗಳು ವೃದ್ಧಿಯಾಗುತ್ತವೆ. ಆ ಮೂಲಕ ವಿದ್ಯಾರ್ಥಿಗಳು ಸಮಾಜಮುಖಿಯಾಗಲು ಪ್ರೇರಣೆಯಾಗಿದೆ.

**PO 5:** ಈ ಪದವಿಯಿಂದ ವಿದ್ಯಾರ್ಥಿಗಳಲ್ಲಿ ಸಂಶೋಧನಾ ಮನೋಭಾವ ರೂಢಿಸುತ್ತದೆ.

**PO 6:** ಈ ಪದವಿಯ ಪಠ್ಯಗಳ ಅಧ್ಯಯನದಿಂದ ತೌಲನಿಕ ಅಧ್ಯಯನಶೀಲರನ್ನಾಗಿಸುತ್ತದೆ.

**PO 7:** ಈ ಪದವಿಯಿಂದ ದೇಶ –ವಿದೇಶಗಳ ಪರಂಪರೆಯನ್ನು ಅರಿಯಲು ಸಹಕಾರಿಯಾಗಿದೆ.

**PO 8:** ಈ ಪದವಿಯ ಪಠ್ಯಗಳ ಅಧ್ಯಯನದಿಂದ ವಿದ್ಯಾರ್ಥಿಗಳ ಜೀವನ ಸಾಮಾಜಿಕ ಬದ್ಧತೆಯೊಂದಿಗೆ ರೂಪುಗೊಳ್ಳುತ್ತದೆ.

**PO 9:** ಈ ಪದವಿಯ ಅಧ್ಯಯನದಿಂದ ವಿದ್ಯಾರ್ಥಿಗಳಲ್ಲಿ ವಿವಿಧ ಮೌಲ್ಯ (ಸಾಮಾಜಿಕ, ಧಾರ್ಮಿಕ, ಕೌಟುಂಬಿಕ, ದೇಶಪ್ರೇಮ) ಗಳ ಜಾಗೃತಗೊಳ್ಳುತ್ತವೆ.

**PO 10:** ಈ ಪದವಿಯಿಂದ ವಿದ್ಯಾರ್ಥಿಗಳ ಸುಪ್ತ ಪ್ರತಿಭೆ ಅನಾವರಣಗೊಳ್ಳುತ್ತದೆ.

**PO 11:** ಈ ಪದವಿಯಿಂದ ವಿದ್ಯಾರ್ಥಿಯಲ್ಲಿ ಕಾಯಕ ಮನೋಭಾವನೆಯನ್ನು ಕ್ರಿಯಾಶೀಲಗೊಳಿಸುತ್ತದೆ.

# VIJAYANAGARA SRI KRISHNADEVARAYA UNIVERSITY

**Distribution of Courses/Papers in Postgraduate Programme I to IV Semester as per Choice Based Credit System (CBCS) Proposed for PG Programs**

## Without Practical

**I SEMESTER**

| Semester No | Category | Subject Code | Title of the Course | Marks | | | Teaching hours / week | | | Credit | Duration of exams(Hrs) |
|---|---|---|---|---|---|---|---|---|---|---|---|
| | | | | IA | Sem. Exam | Total | L | T | P | | |
| FIRST | DSC1 | 21KAN1C1L | ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆ | 30 | 70 | 100 | 4 | - | - | 4 | 3 |
| | DSC2 | 21KAN1C2L | ಭಾರತೀಯ ಕಾವ್ಯ ಮಿಮಾಂಸೆ | 30 | 70 | 100 | 4 | - | - | 4 | 3 |
| | DSC3 | 21KAN1C3L | ಸಾಹಿತ್ಯ ವಿಮರ್ಶೆ | 30 | 70 | 100 | 4 | - | - | 4 | 3 |
| | DSC4 | 21KAN1C4L | ಕನ್ನಡ ಮೌಖಿಕ ಸಾಹಿತ್ಯ | 30 | 70 | 100 | 4 | - | - | 4 | 3 |
| | DSC5 | 21KAN1C5L | ಕನ್ನಡ ನಾಡು–ನುಡಿ–ಸಾಂಸ್ಕೃತಿಕ ಚರಿತ್ರೆ | 30 | 70 | 100 | 4 | - | - | 4 | 3 |
| | SEC1 | 21KAN1S1L/T/LT | ಕೌಶಲ್ಯ ಭಾಷಾಂತರ | 20 | 30 | 50 | 1 | - | 1 | 2 | 2 |
| | DSCT | 21KAN1C1T | ಸಾಹಿತ್ಯ ವಿಮರ್ಶೆ | 20 | 30 | 50 | - | 2 | - | 2 | 2 |
| **Total Marks for I Semester** | | | | | | **600** | | | | **24** | |

**II SEMESTER**

| Semester No | Category | Subject Code | Title of the Course | Marks | | | Teaching hours / week | | | Credit | Duration of exams(Hrs) |
|---|---|---|---|---|---|---|---|---|---|---|---|
| | | | | IA | Sem. Exam | Total | L | T | P | | |
| SECOND | DSC6 | 21KAN2C6L | ಮಧ್ಯಕಾಲಿನ ಕನ್ನಡ ಸಾಹಿತ್ಯ ಚರಿತ್ರೆ | 30 | 70 | 100 | 4 | - | - | 4 | 3 |
| | DSC7 | 21KAN2C7L | ಪಾಶ್ಚಾತ್ಯ ಕಾವ್ಯ ಮಿಮಾಂಸೆ | 30 | 70 | 100 | 4 | - | - | 4 | 3 |
| | DSC8 | 21KAN2C8L | ಕನ್ನಡ ಮಹಿಳಾ ಸಾಹಿತ್ಯ | 30 | 70 | 100 | 4 | - | - | 4 | 3 |
| | DSC9 | 21KAN2C9L | ಶಾಸನ ಸಾಹಿತ್ಯ ಮತ್ತು ಗ್ರಂಥಸಂಪಾದನೆ | 30 | 70 | 100 | 4 | - | - | 4 | 3 |
| | DSC10 | 21KAN2C10L | ಕನ್ನಡ ಭಾಷಾ ರಚನೆ | 30 | 70 | 100 | 4 | - | - | 4 | 3 |
| | SEC2 | 21KAN2S2L/T/LT | ಸಮೂಹ ಮಾಧ್ಯಮಗಳು ಮತ್ತು ಕನ್ನಡ | 20 | 30 | 50 | 1 | - | 1 | 2 | 2 |
| | DSCT | 21KAN2C2T | ಶಾಸನ ಸಾಹಿತ್ಯ ಮತ್ತು ಗ್ರಂಥಸಂಪಾದನೆ | 20 | 30 | 50 | - | 2 | - | 2 | 2 |
| **Total Marks for II Semester** | | | | | | **600** | | | ¤ | **24** | |

## III SEMESTER

| Semester No | Category | Subject Code | Title of the Course | Marks | | | Teaching hours / week | | | Credit | Duration of exams(Hrs) |
|---|---|---|---|---|---|---|---|---|---|---|---|
| | | | | IA | Sem. Exam | Total | L | T | P | | |
| THIRD | DSC11 | 21KAN3C11L | ಆಧುನಿಕ ಕನ್ನಡ ಸಾಹಿತ್ಯ | 30 | 70 | 100 | 20 | 4 | - | 4 | 3 |
| | DSC12 | 21KAN3C12L | ಸೃಜನ ಸಾಹಿತ್ಯ ಮತ್ತು ವೈಚಾರಿಕ ಸಾಹಿತ್ಯ | 30 | 70 | 100 | 20 | 4 | - | 4 | 3 |
| | DSC13 | 21KAN3C13L | ನಿಘಂಟು ವಿಜ್ಞಾನ ಮತ್ತು ನಾಮ ವಿಜ್ಞಾನ | 30 | 70 | 100 | 20 | 4 | - | 4 | 3 |
| | DSE1 | 21KAN3E1L | ಅ) ಶಾಸ್ತ್ರೀಯ ಸಾಹಿತ್ಯ ಅಧ್ಯಯನ–1 | 30<br>30<br>30 | 70<br>70<br>70 | 100 | 20 | 4 | - | 4 | 3 |
| | | | ಆ) ಮಹಿಳಾ ಸಾಹಿತ್ಯ ಅಧ್ಯಯನ–1 | | | | | | | | |
| | | | ಇ) ಆಧುನಿಕ ಕನ್ನಡ ಸಾಹಿತ್ಯ | | | | | | | | |
| | DSE2 | 21KAN3E2L | ಅ) ಜಾನಪದ ಸಾಹಿತ್ಯ ಅಧ್ಯಯನ–1 | 30 | 70 | 100 | 20 | 4 | - | 4 | 3 |
| | | | ಆ) ತೌಲನಿಕ ಸಾಹಿತ್ಯ ಅಧ್ಯಯನ–1 | | | | | | | | |
| | | | ಇ) ಭಾಷಾ ವಿಜ್ಞಾನ–1 | | | | | | | | |
| | GEC1 | 21KAN3G1L | ಅ) ಭಾರತೀಯ ಸಾಹಿತ್ಯಾಧ್ಯಯನ | 20 | 30 | 50 | 10 | 2 | - | 2 | 2 |
| | | | ಆ) ವಚನ ಸಾಹಿತ್ಯ | | | | | | | | |
| | | | ಇ) ಕನ್ನಡ ಕಾದಂಬರಿ ಸಾಹಿತ್ಯ | | | | | | | | |
| | DSCT | 21KAN3C3T | ನಿಘಂಟು ವಿಜ್ಞಾನ | 20 | 30 | 50 | 20 | - | 2 | 2 | 2 |
| **Total Marks for III Semester** | | | | | | **600** | | | | **24** | |

**IV SEMESTER**

| Semester No | Category | Subject Code | Title of the Course | Marks | | | Teaching hours / week | | | Credit | Duration of exams(Hrs) |
|---|---|---|---|---|---|---|---|---|---|---|---|
| | | | | IA | Sem. Exam | Total | L | T | P | | |
| FOURTH | DSC14 | 21KAN3C14L | ಕನ್ನಡ ಸಂಶೋಧನೆ | 30 | 70 | 100 | 4 | - | - | 4 | 3 |
| | DSC15 | 21KAN3C15L | ಕನ್ನಡ ಮತ್ತು ಕಂಪ್ಯೂಟರ್ ತಂತ್ರಜ್ಞಾನ | 30 | 70 | 100 | 4 | - | - | 4 | 3 |
| | DSE3 | 21KAN4E3L | ಅ) ಶಾಸ್ತ್ರೀಯ ಸಾಹಿತ್ಯ ಅಧ್ಯಯನ–2<br>ಆ) ಮಹಿಳಾ ಸಾಹಿತ್ಯ ಅಧ್ಯಯನ–2<br>ಇ) ಆಧುನಿಕ ಕನ್ನಡ ಸಾಹಿತ್ಯ–2 | 30<br>30<br>30 | 70<br>70<br>70 | 100 | 4 | - | - | 4 | 3 |
| | DSE4 | 21KAN4E4L | ಅ) ಜಾನಪದ ಸಾಹಿತ್ಯ ಅಧ್ಯಯನ–2<br>ಆ) ತೌಲನಿಕ ಸಾಹಿತ್ಯ ಅಧ್ಯಯನ–2<br>ಇ) ಭಾಷಾ ವಿಜ್ಞಾನ–2 | 30 | 70 | 100 | 4 | - | - | 4 | 3 |
| | GEC2 | 21KAN4G2L | ಅ) ಜಾನಪದ ಸಾಹಿತ್ಯ<br>ಆ) ದಾಸ ಸಾಹಿತ್ಯ<br>ಇ) ಕನ್ನಡ ಆಧುನಿಕ ಸಣ್ಣಕತೆ | 20 | 30 | 50 | 2 | - | - | 2 | 2 |
| | SEC3 | 21KAN4S3L/T/LT | ರಂಗಭೂಮಿ ಅಧ್ಯಯನ | 20 | 30 | 50 | 1 | | 1 | 2 | 2 |
| | Project | 21KAN4C1R | ಸಂಶೋಧನಾ ಪ್ರಾಜೆಕ್ಟ್ | 40 | 60 | 100 | | - | 8 | | 4 |
| **Total Marks for IV Semester** | | | | | | **600** | | | | **24** | |

**(I-IV semester)- Total Marks: 2400 and Total credits: 96**

**Note:** Course = paper; L= Lecture; T= Tutorial; P=Practical; DSC= Discipline Specific Core Course; DSE= Discipline Specific Elective; SEC= Skill Enhancement Course; GEC1 = General Elective Course to be taken from within Faculty from other departments. GEC2= General Elective Course to be taken outside Faculty.

A credit is a unit of study of a fixed duration. For the purpose of computation of workload as per UGC norms the following is mechanism be adopted in the university: One credit (01) = One Theory Lecture (L) period of one hour; One credit (01) = One Tutorial (T) period of one hour; One credit (01) = One practical (P) period of two hours.

A Tutorial is supplementary practice to any teaching –learning process that may consist of participatory discussion/self study, desk work, seminar presentations by students and such other novel methods that help a student to absorb and assimilate more effectively the contents delivered in the Lecture Sessions/ Class, Seminars, Case study, Discussion Session etc.

### Subject Code Description:

**21** – Year of Establishment
**KAN**– Program Code (here it is KAN)
**1/2/3/4** – Semester
**C1/S1/G1/E1** – Course subject 1/SEC1/GEC1/DSE1
**L** – Lecture
**T** – Tutorial
**P** – Practical
**R** – Research Project

## ವಿಜಯನಗರ ಶ್ರೀ. ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ
## ಕನ್ನಡ ಅಧ್ಯಯನ ವಿಭಾಗ
## ಎಂ.ಎ. ಕನ್ನಡ ಮೊದಲನೆಯ ಸೆಮಿಸ್ಟರ್ ಪಠ್ಯಕ್ರಮ

| Semester No | Category | Subject Code | Title of the Course |
|---|---|---|---|
| First | DSC1 | 21KAN1C1L | ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆ |
| | DSC2 | 21KAN1C2L | ಭಾರತೀಯ ಕಾವ್ಯ ಮಿಮಾಂಸೆ |
| | DSC3 | 21KAN1C3L | ಸಾಹಿತ್ಯ ವಿಮರ್ಶೆ |
| | DSC4 | 21KAN1C4L | ಕನ್ನಡ ಮೌಖಿಕ ಸಾಹಿತ್ಯ |
| | DSC5 | 21KAN1C5L | ಕನ್ನಡ ನಾಡು–ನುಡಿ–ಪ್ರಜ್ಞೆ ಸಾಂಸ್ಕೃತಿಕ ಚರಿತ್ರೆ |
| | SEC1 | 21KAN1S1L/T/LT | ಕೌಶಲ್ಯ ಭಾಷಾಂತರ |
| | DSCT | 21KAN1C1T | ಸಾಹಿತ್ಯ ವಿಮರ್ಶೆ |

### ಪ್ರಥಮ ಸೆಮಿಸ್ಟರ್ ಎಂ.ಎ ಕನ್ನಡ

| | |
|---|---|
| ಪತ್ರಿಕೆ: ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆ | ಕೋರ್ಸ್ ಕೋಡ್ : DSC-1 |
| ಬೋಧನಾ ಅವಧಿ : ವಾರ ( L-T-P ): 4–0–0 | ನಂ. ಕ್ರೆಡಿಟ್ಸ್: 04 |
| ಅಂತರಿಕ ಮೌಲ್ಯಮಾಪನ : 30 ಅಂಕಗಳು | ಸೆಮಿಸ್ಟರ್ ಕೊನೆಯ ಪರೀಕ್ಷೆ: 70 ಅಂಕಗಳು |

## Course Outcome (ಕೋರ್ಸ್ ಔಟ್‌ಕಮ್ಸ್)

- ಪ್ರಾಚೀನ ಕಾಲ ಸಂದರ್ಭದ ಮೌಲ್ಯ ಮತ್ತು ಆದರ್ಶಗಳ ಅರಿವು ವಿದ್ಯಾರ್ಥಿಗಳಿಗೆ ಉಂಟಾಗುತ್ತದೆ.
- ಜೈನಧರ್ಮದ ತಾತ್ವಿಕತೆಯನ್ನು ಅರಿಯಲು ಸಹಾಯ ಆ ಮೂಲಕ ಸೌಹಾರ್ದ ಮನೋಭಾವ ವಿದ್ಯಾರ್ಥಿಗಳಲ್ಲಿ ಮೂಡುತ್ತದೆ
- ನಮ್ಮ ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿಯ ಪ್ರತೀಕವಾದ ಮಹಾಭಾರತ ಹಾಗೂ ರಾಮಾಯಣಗಳಂತಹ ಮಹಾಕಾವ್ಯಗಳನ್ನು ಪರಿಚಯಿಸಿಕೊಡಲು ಸಹಕಾರಿಯಾಗಿದೆ.
- ಪ್ರಾಚೀನ ಕಾಲದಲ್ಲಿಯ ವೀರಜೀವನ ಹಾಗೂ ಕ್ಷಾತ್ರತೇಜಸ್ಸನ್ನು ಪರಿಚಯಿಸಿಕೊಡುವುದರ ಮೂಲಕ ವಿದ್ಯಾರ್ಥಿಗಳನ್ನು ಸದೃಢ ಪ್ರಜೆಗಳನ್ನಾಗಿಸಲು ಈ ಪತ್ರಿಕೆ ಸಹಕಾರಿಯಾಗಿದೆ.

**ಘಟಕ:** **1.** ಕವಿರಾಜಮಾರ್ಗ ಪೂರ್ವ ಹಾಗೂ ಕವಿರಾಜಮಾರ್ಗ ಪರಿಸರದ ಸಾಹಿತ್ಯ **12**
**ಘಟಕ:** **2.** ಚಂಪೂ ಪ್ರಕಾರ : ಪಂಪ, ರನ್ನ, ಪೊನ್ನ, ಜನ್ನ , ನಾಗಚಂದ್ರ. ಷಡಕ್ಷರಿ **11**
**ಘಟಕ:** **3.** ಗದ್ಯಪ್ರಕಾರ : ಶಿವಕೊಟ್ಯಾಚಾರ್ಯ, ದುರ್ಗಸಿಂಹ **08**
**ಘಟಕ:** **4.** ಶಾಸ್ತ್ರ ಸಾಹಿತ್ಯ : ಮುಖ್ಯಶಾಸ್ತ್ರ ಸಾಹಿತ್ಯ ಕೃತಿಗಳ ಪರಿಚಯ **10**
**ಘಟಕ:** **5.** ದೇಸಿ ಕಾವ್ಯ ಪ್ರಕಾರಗಳು **15**

ಅ) ರಗಳೆ : ಹರಿಹರ, ಕೆರೆಯ ಪದ್ಮರಸ
ಆ) ವಚನ : ಬಸವಣ್ಣ, ಅಲ್ಲಮ, ಅಕ್ಕಮಹಾದೇವಿ, ಚನ್ನಬಸವಣ್ಣ
ಇ) ಷಟ್ಪದಿ : ರಾಘವಾಂಕ, ಚಾಮರಸ, ಕುಮಾರವ್ಯಾಸ
ಈ) ತ್ರಿಪದಿ : ಭೀಮಕವಿ, ತೊರವೆ ನರಹರಿ, ಚಾಟುವಿಠಲನಾಥ, ಅಕ್ಕಮಹಾದೇವಿ
ಉ) ಸಾಂಗತ್ಯ : ರತ್ನಾಕರವರ್ಣಿ, ಸಂಚಿಹೊನ್ನಮ್ಮ, ನರಹರಿ, ಹೆಳವನಕಟ್ಟೆ ಗಿರಿಯಮ್ಮ
ಊ) ಕೀರ್ತನೆ : ಪುರಂದರದಾಸರು, ಕನಕದಾಸರು, ವ್ಯಾಸರಾಯರು, ಶ್ರೀಪಾದರಾಯರು, ಜಗನ್ನಾಥದಾಸರು

**ಪರಾಮರ್ಶನ ಗ್ರಂಥಗಳು :**


1. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ (ಪ್ರ) ಬೆಂ.ವಿ.ವಿ
2. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ (ಪ್ರ) ಬೆಂ.ವಿ.ವಿ
3. ಕನ್ನಡ ಸಾಹಿತ್ಯ ಚರಿತ್ರೆ (ಸಂ) ರಂ.ಶ್ರೀ. ಮುಗಳಿ
4. ಕನ್ನಡ ಸಾಹಿತ್ಯ ಚರಿತ್ರೆ (ಸಂ) ತ.ಶು. ಶಾಮರಾಯ
5. ಕನ್ನಡ ಸಾಹಿತ್ಯ ಪುನರ್ ಮೌಲ್ಯೀಕರಣ ಮಾಲೆಯ: ಕರ್ನಾಟಕ ಸಾಹಿತ್ಯ ಅಕಾಡೆಮಿ ಸಂಪುಟಗಳು
6. ಕವಿರಾಜಮಾರ್ಗ : ಸಾಹಿತ್ಯ ಮೀಮಾಂಸೆ ಡಾ. ಕೆ. ಎಸ್. ಶಿವಪ್ರಕಾಶ
7. ಕನ್ನಡ ಕವಿ ಚರಿತೆ: ಮೂರು ಸಂಪುಟಗಳು, ಆರ್. ನರಸಿಂಹಾಚಾರ್ಯ
8. ಕನ್ನಡ ಸಾಹಿತ್ಯ ಮತ್ತು ಚಾರಿತ್ರಿಕ ಪ್ರಜ್ಞೆ: ಸಿ. ವೀರಣ್ಣ, ಬೆಂ.ವಿ.ವಿ.
9. ಕನ್ನಡಶಾಸ್ತ್ರ ಸಂಕಥನ: ಕೊಟ್ರಸ್ವಾಮಿ ಎ.ಎಂ.ಎಂ.
10. ಕನ್ನಡ ಸಾಹಿತ್ಯ : ಕವಿ ಕಾವ್ಯ ಚರಿತೆ : ಡಾ. ಕೆ. ಎಸ್. ಶಿವಪ್ರಕಾಶ

## ಪ್ರಥಮ ಸೆಮಿಸ್ಟರ್ ಎಂ.ಎ ಕನ್ನಡ

| | |
|---|---|
| ಪತ್ರಿಕೆ: ಭಾರತೀಯ ಕಾವ್ಯ ಮೀಮಾಂಸೆ | ಕೋರ್ಸ್ ಕೋಡ್ : DSC-2 |
| ಬೋಧನಾ ಅವಧಿ : ವಾರ ( L-T-P ): 4–0–0 | ನಂ. ಕ್ರೆಡಿಟ್ಸ್: 04 |
| ಅಂತರಿಕ ಮೌಲ್ಯಮಾಪನ : 30 ಅಂಕಗಳು | ಸೆಮಿಸ್ಟರ್ ಕೊನೆಯ ಪರೀಕ್ಷೆ: 70 ಅಂಕಗಳು |

- **Course Outcome (ಕೋರ್ಸ್ ಔಟ್‌ಕಮ್ಸ್)**
- ಭಾರತೀಯ ಕಾವ್ಯ ಮೀಮಾಂಸೆಯ ಅಧ್ಯಯನದಿಂದ ವಿದ್ಯಾರ್ಥಿಗಳಲ್ಲಿ ಕಾವ್ಯವನ್ನು ನಿರ್ಮಿಸುವ, ವಿವೇಚಿಸುವ ಕಲೆಯನ್ನು ಬೋಧಿಸುತ್ತದೆ.
- ಈ ಪತ್ರಿಕೆಯ ಅಧ್ಯಯನದಿಂದ ಕಾವ್ಯದಲ್ಲಿ ಅಲಂಕಾರ, ಛಂದಸ್ಸು ಇತ್ಯಾದಿ ಅಂಶಗಳನ್ನು ಪ್ರಯೋಗಿಸುವ ಪ್ರಜ್ಞೆ ವಿದ್ಯಾರ್ಥಿಗಳಲ್ಲಿ ಉಂಟಾಗುತ್ತದೆ.
- ಈ ಪತ್ರಿಕೆಯ ಅಧ್ಯಯನದಿಂದ ವಿದ್ಯಾರ್ಥಿಗಳಿಗೆ ಕಾವ್ಯದಲ್ಲಿನ ಗುಣ–ದೋಷ ವಿವೇಚನೆ ಹಾಗೂ ಮೌಲ್ಯಮಾಪನ ಮಾಡಲು ಸಹಕಾರಿಯಾಗಿದೆ.
- ಈ ಪತ್ರಿಕೆ ಅಧ್ಯಯನದಿಂದ ಕಾವ್ಯವನ್ನು ಓದುವ ಅಭಿರುಚಿಯನ್ನು ಬೆಳೆಸುತ್ತದೆ.

| | | |
|---|---|---|
| **ಘಟಕ.: 1.** | ಭಾರತೀಯ ಕಾವ್ಯಮೀಮಾಂಸೆಯ ರೂಪುರೇಷೆ, ಕಾವ್ಯದ ಸ್ವರೂಪ, ಭರತನ ರಸಸೂತ್ರ | **11** |
| **ಘಟಕ.: 2.** | ವಿವಿಧ ಪ್ರಸ್ಥಾನಗಳು: ಅಲಂಕಾರ, ರೀತಿ, ಗುಣ, ಧ್ವನಿ, ವಕ್ರೋಕ್ತಿ ಮತ್ತು ಔಚಿತ್ಯ | **14** |
| **ಘಟಕ.: 3.** | ಪ್ರಾಚೀನ ಕಾವ್ಯಮೀಮಾಂಸೆ ಮತ್ತು ಆಧುನಿಕ ವಿಮರ್ಶೆ | **08** |
| **ಘಟಕ.: 4.** | ಧ್ವನ್ಯಾಲೋಕ, ಆಧುನಿಕ ಕಾವ್ಯಚಿಂತನೆಗಳ ಹಿನ್ನೆಲೆಯಲ್ಲಿ–ವಿಶೇಷ ಲಕ್ಷ್ಯ: ಕೆ.ವಿ. ನಾರಾಯಣ, ತೊಂಡುಮೇವು, | **10** |
| **ಘಟಕ: 5.** | ಕಾವ್ಯಮೀಮಾಂಸೆ ಕುರಿತ ಕನ್ನಡದ ಈಚಿನ ಒಲವು–ನಿಲುವುಗಳು ಹಾಗೂ ಕನ್ನಡ ಕಾವ್ಯಮೀಮಾಂಸೆ | **11** |

**ಪರಾಮರ್ಶನ ಗ್ರಂಥಗಳು:**


1. ಭಾರತೀಯ ಕಾವ್ಯಮೀಮಾಂಸೆ, ತೀ.ನಂ. ಶ್ರೀಕಂಠಯ್ಯ
2. ಸತ್ಯ ಮತ್ತು ಸೌಂದರ್ಯ: ಎಸ್.ಎಸ್. ಬೈರಪ್ಪ
3. ಕಾವ್ಯಾರ್ಥ ಚಿಂತನ, ಜಿ. ಎಸ್. ಶಿವರುದ್ರಪ್ಪ
4. ಸಾಹಿತ್ಯ ವಿಮರ್ಶೆಯ ಮೂಲತತ್ವಗಳು: ಎಚ್. ತಿಪ್ಪೇರುದ್ರಸ್ವಾಮಿ
5. ಸ್ತ್ರೀ ದರ್ಪಣದಲ್ಲಿ ನಾಟ್ಯಶಾಸ್ತ್ರ: ಬಿ. ಎನ್. ಸುಮಿತ್ರಾಬಾಯಿ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ
6. ವಾಕ್ಯಪದೀಯ, ಅನು. ಎನ್. ರಂಗನಾಥಶರ್ಮಾ, ಅಕ್ಷರ ಪ್ರಕಾಶನ, ಹೆಗ್ಗೋಡು
7. ಸೌಂದರ್ಯ ಮೀಮಾಂಸೆ, ಜಿ.ಎಸ್. ಶಿವರುದ್ರಪ್ಪ, ಕಾಮಧೇನು ಪ್ರಕಾಶನ, ಬೆಂಗಳೂರು
8. ಆ ಮುಖ, ಜೆ. ಶ್ರೀನಿವಾಸಮೂರ್ತಿ, ಇಳಾ ಪ್ರಕಾಶನ, ಬೆಂಗಳೂರು
9. ಭರತಮುನಿ ವಿರಚಿತ ನಾಟ್ಯಶಾಸ್ತ್ರ, ಆದ್ಯ ರಂಗಾಚಾರ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು
10. ಧ್ವನ್ಯಾಲೋಕದ ಓದು, ಕೆ.ವಿ. ನಾರಾಯಣ, ಅಭಿನವ ಪ್ರಕಾಶನ, ಬೆಂಗಳೂರು
11. ರಸೋಲ್ಲಾಸ, ಕೆ. ಕೃಷ್ಣಮೂರ್ತಿ, ಮೈಸೂರು
12. ನಮ್ಮ ಸೌಂದರ್ಯ ಮೀಮಾಂಸೆ, ಸುದರ್ಶನ (ಸಂ), ಮೂಲ್ಕಿ
13. ವಕ್ರೋಕ್ತಿ ಮತ್ತು ಶೈಲಿಶಾಸ್ತ್ರದ ಪರಿಕಲ್ಪನೆಗಳು, ಆರ್. ಲಕ್ಷ್ಮೀನಾರಾಯಣ (ಅನು), ಐಬಿಎಚ್ ಪ್ರಕಾಶನ, ಬೆಂಗಳೂರು.
14. ಭಾರತೀಯ ಕಾವ್ಯಮೀಮಾಂಸೆ : ತಾತ್ವಿಕ ಚಿಂತನೆ. ಡಾ. ಕೆ.ಎಸ್. ಶಿವಪ್ರಕಾಶ

## ಪ್ರಥಮ ಸೆಮಿಸ್ಟರ್ ಎಂ.ಎ ಕನ್ನಡ

| | |
|---|---|
| ಪತ್ರಿಕೆ : ಸಾಹಿತ್ಯ ವಿಮರ್ಶೆ | ಕೋರ್ಸ್ ಕೋಡ್ DSC-3 |
| ಬೋಧನಾ ಅವಧಿ : ವಾರ ( L-T-P ): 4–0–0 | ನಂ. ಕ್ರೆಡಿಟ್ಸ್: 04 |
| ಅಂತರಿಕ ಮೌಲ್ಯಮಾಪನ : 30 ಅಂಕಗಳು | ಸೆಮಿಸ್ಟರ್ ಕೊನೆಯ ಪರೀಕ್ಷೆ: 70 ಅಂಕಗಳು |

- **Course Outcome (ಕೋರ್ಸ್ ಔಟ್‌ಕಮ್ಸ್)**
- ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿರುವ ಜೀವನಾನುಭವಗಳನ್ನು ಅರ್ಥಮಾಡಿಕೊಳ್ಳುವ ವಿಶೇಷವಾದ ಅರಿವು ಮುಖ್ಯವಾಗುತ್ತದೆ. ಈ ಪತ್ರಿಕೆಯು ಅಂತಹ ಅವಶ್ಯಕತೆಯನ್ನು ರೂಢಿಗತಗೊಳಿಸುವಲ್ಲಿ ಸಹಾಯಕವಾಗಿದೆ.
- ಈ ಪತ್ರಿಕೆಯಿಂದ ಜಾಗತಿಕ ಮಟ್ಟದಲ್ಲಿ ಸಾಹಿತ್ಯದ ಮೂಲಕ ಸಮಾಜವನ್ನು ಅರ್ಥಮಾಡಿಕೊಳ್ಳಲು ಇರುವ ದಾರಿಗಳನ್ನು ವಿದ್ಯಾರ್ಥಿಗಳು ಅರಿಯಬಹುದಾಗಿದೆ.
- ಈ ಪತ್ರಿಕೆಯು ಸಮಾಜದಲ್ಲಿ ಇರುವ ಮೂಢನಂಬಿಕೆ, ಕಂದಾಚಾರ ಮತ್ತು ದೌರ್ಜನ್ಯದಂತಹ ದೌರ್ಜನ್ಯದಂತಹ ಘಟನೆಗಳನ್ನು ಅರಿವಿಗೆ ತಂದು ಸಮ ಸಮಾಜದ ಪರಿಕಲ್ಪನೆಯನ್ನು ಮೂಡಿಸುತ್ತದೆ.
- ಅನೇಕ ಚಿಂತಕರ ಸಾಹಿತ್ಯ ಕೃತಿಯನ್ನು ಗ್ರಹಿಸಿಕೊಳ್ಳಲು ಹೇಳಿರುವ ಮಾನದಂಡಗಳನ್ನು ಅರಿಯಬಹುದು. ಇದರೊಂದಿಗೆ ಸಾಹಿತ್ಯ ಎನ್ನುವುದು ಸಮಾಜದ ಚಿಕಿತ್ಸಕ ಮನೋಭಾವವನ್ನು ಮೂಡಿಸಲು ಈ ಪತ್ರಿಕೆಯ ಮೂಲಕ ವಿದ್ಯಾರ್ಥಿಗಳಿಗೆ ಮನನ ಮಾಡಿಕೊಡಬಹುದು.

**ಘಟಕ.: 1.** ಸಾಹಿತ್ಯ ವಿಮರ್ಶೆ– ಅರ್ಥ, ಸ್ವರೂಪ, ಉದ್ದೇಶ, ಮೂಲತತ್ವಗಳು, ವಿಧಾನಗಳು **10**

**ಘಟಕ :2.** ವಿಮರ್ಶೆಯ ಪ್ರಕಾರಗಳು–

ಅ) ಚಾರಿತ್ರಿಕ, ರೂಪನಿಷ್ಠ, ಸಮಾಜಶಾಸ್ತ್ರೀಯ, ಮನೋವೈಜ್ಞಾನಿಕ, ಪ್ರಾಯೋಗಿಕ, ರಾಚನಿಕ, ವಸ್ತುನಿಷ್ಠ ಮತ್ತು ಸ್ತ್ರೀವಾದಿ ವಿಮರ್ಶೆ **12**

ಆ) ಒಳಮುಖಿ ವಿಮರ್ಶೆ– ಹೊರಮುಖಿ ವಿಮರ್ಶೆ

ಇ) ಪಾಶ್ಚಾತ್ಯ ಸಾಹಿತ್ಯ ವಾದಗಳು– ಅಭಿಜಾತವಾದ, ನವಅಭಿಜಾತವಾದ, ರಮ್ಯವಾದ, ಆದರ್ಶವಾದ, ಸೌಂದರ್ಯವಾದ, ವಾಸ್ತವವಾದ, ಸಂಕೇತವಾದ, ಪ್ರತಿಮಾವಾದ, ಅಭಿವ್ಯಕ್ತಿವಾದ, ಅತಿವಾಸ್ತವಾದ, ಅಸ್ತಿತ್ವವಾದ, ನವ್ಯವಾದ, ನವ್ಯೋತ್ತರವಾದ, ಕಪ್ಪು ಸುಂದರವಾದ

**ಘಟಕ.: 3.** ಸಾಹಿತ್ಯ ವಿಮರ್ಶೆ ಹಾಗೂ ಕಾವ್ಯ ಮೀಮಾಂಸೆ **10**

**ಪಠ್ಯಗಳು :**

**ಘಟಕ.: 4.** ಅ) ತಪೋನಂದನ : ಕುವೆಂಪು.

ಆ) ಮಣ್ಣಿನ ವಾಸನೆ : ಗೋಪಾಲ ಕೃಷ್ಣ ಅಡಿಗ. ಎಂ

**11**

**ಘಟಕ.: 5.** ಅ) ಯುಗಧರ್ಮ ಮತ್ತು ಸಾಹಿತ್ಯ ದರ್ಶನ : ಕೀರ್ತಿನಾಥ ಕುರ್ತಕೋಟಿ **11**

ಆ) ಎದೆಗೆ ಬಿದ್ದ ಅಕ್ಷರ : ದೇವನೂರು ಮಹಾದೇವ

**ಪರಾಮರ್ಶನ ಗ್ರಂಥಗಳು:**


1. ಸಾಹಿತ್ಯ ವಿಮರ್ಶೆ : ಸಿ.ಎನ್. ರಾಮಚಂದ್ರನ್
2. ಸ್ತ್ರೀವಾದಿ ವಿಮರ್ಶೆ : (ಸಂ)ತೇಜಸ್ವಿನಿ ನಿರಂಜನ ನೇಮಂತಿನಿ
3. ಶತಮಾನದ ವಿಮರ್ಶೆ : (ಸಂ) ಎಚ್.ಎಸ್. ರಾಘವೇದ್ರರಾವ್
4. ಯುಗಧರ್ಮ ಮತ್ತು ಸಾಹಿತ್ಯ ದರ್ಶನ : ಕೀರ್ತಿನಾಥ ಕುರ್ತಕೋಟಿ
5. ದಶವಾರ್ಷಿಕ ವಿಮರ್ಶೆ : (ಸಂ) ಕೆ.ಎಸ್ ನಿಸಾರ್ ಅಹಮದ್

6. ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ : (ಸಂ) ಬರಗೂರು ರಾಮಚಂದ್ರಪ್ಪ
7. ಸಮಗ್ರ ಗದ್ಯ – ಸಂಪುಟಗಳು : ಜಿ.ಎಸ್. ಶಿವರುದ್ರಪ್ಪ
8. ನವ್ಯ ಸಾಹಿತ್ಯ ದರ್ಶನ : ಶಾಂತಿನಾಥ ದೇಸಾಯಿ
9. ನವ್ಯತೆ : ನರಹಳ್ಳಿ ಬಾಲಸುಬ್ರಮಣ್ಯ
10. ಸಾಹಿತ್ಯ ವಿಮರ್ಶೆಯ ಮೂಲತತ್ವಗಳು– ಡಾ. ಎಚ್. ತಿಪ್ಪೇರುದ್ರಸ್ವಾಮಿ
11. ವಿಮರ್ಶೆಯ ಪರಿಭಾಷೆ– ಓ. ಎಲ್. ನಾಗಭೂಷಣಸ್ವಾಮಿ
12. ಪ್ರಾಯೋಗಿಕ ವಿಮರ್ಶೆ– ಡಾ. ಜಿ. ಎಸ್. ಶಿವರುದ್ರಪ್ಪ
13. ಕನ್ನಡ ಸಾಹಿತ್ಯ ಮೀಮಾಂಸೆ– ಡಾ. ರಹಮತ ತರಿಕೆರೆ
14. ಪಾಶ್ಚಾತ್ಯ ಸಾಹಿತ್ಯ ವಾದಗಳು– ಸಿ. ಆರ್. ಯರವಿನತಲೆಮಠ
15. ಕಾವ್ಯ ಶಾಸ್ತ್ರ ಪರಿಭಾಷೆ – ಮಲ್ಲೇಪುರಂ. ಜಿ. ವೆಂಕಟೇಶ
16. 20th Century Literary Criticism vol-1 & 2 (Ed) David Lodge
17. ಕನ್ನಡ ಸಾಹಿತ್ಯ ಮೀಮಾಂಸೆ ಹಾಗೂ ವಿಮರ್ಶೆ ಡಾ. ಕೆ.ಎಸ್. ಶಿವಪ್ರಕಾಶ

## ಪ್ರಥಮ ಸೆಮಿಸ್ಟರ್ ಎಂ.ಎ ಕನ್ನಡ

| | |
|---|---|
| ಪತ್ರಿಕೆ: ಕನ್ನಡ ಮೌಖಿಕ ಸಾಹಿತ್ಯ | ಕೋರ್ಸ್ ಕೋಡ್ **DSC-4** |
| ಬೋಧನಾ ಅವಧಿ : ವಾರ ( L-T-P ): 4–0–0 | ನಂ. ಕ್ರೆಡಿಟ್ಸ್: 04 |
| ಅಂತರಿಕ ಮೌಲ್ಯಮಾಪನ : 30 ಅಂಕಗಳು | ಸೆಮಿಸ್ಟರ್ ಕೊನೆಯ ಪರೀಕ್ಷೆ: 70 ಅಂಕಗಳು |

- **Course Outcome (ಕೋರ್ಸ್ ಔಟ್‌ಕಮ್ಸ್)**
- ಮೌಖಿಕ ಸಾಹಿತ್ಯ ಕಾಯಕ ತತ್ವದಡಿಯಲ್ಲಿ ಹುಟ್ಟಿರುವಂಥದ್ದು ಈ ಹಿನ್ನೆಲೆಯಲ್ಲಿ ಕಾಯಕ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುತ್ತದೆ.
- ಮೌಖಿಕ ಸಾಹಿತ್ಯದಲ್ಲಿ ಅಡಕವಾಗಿರುವ ದೇಸಿ ಪ್ರಜ್ಞೆ ಸಮಾಜ–ಸಂಸ್ಕೃತಿ, ಲೋಕಜ್ಞಾನ, ಮಾನವೀಯ ಮೌಲ್ಯ, ಜೀವಪರ ಮನೋಧರ್ಮದಿಂದ ಕೂಡಿರುವಂಥದ್ದು ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಅದರ ಬಗೆಗೆ ಅರಿವು ಉಂಟಾಗುತ್ತದೆ.
- ಅನ್ಯ ಸಂಸ್ಕೃತಿಗಳ ಒತ್ತಡಗಳಿಗೆ ಒಳಗಾಗದಿರುವ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುತ್ತದೆ.
- ಮೌಖಿಕ ಸಾಹಿತ್ಯ ಬಗೆಗಿನ ಕೀಳರಿಮೆ ಹೋಗಲಾಡಿಸಿ, ಈ ಸಾಹಿತ್ಯದ ವೈಚಾರಿಕ ನೆಲೆ ಅರಿವಿಗೆ ಬರುತ್ತದೆ.

**ಘಟಕ.: 1**. ಅ)ಮೌಖಿಕ ಸಾಹಿತ್ಯ ಪರಿಕಲ್ಪನೆ ಮತ್ತು ಪ್ರಧಾನ ಲಕ್ಷಣಗಳು **10**
ಆ) ಮೌಖಿಕ ಸಾಹಿತ್ಯ ಮತ್ತು ಲಿಖಿತ ಸಾಹಿತ್ಯಗಳ ಅಂತಸ್ಸಂಬಂಧಗಳು

**ಘಟಕ.: 2**. ಅ)ಮೌಖಿಕ ಸಾಹಿತ್ಯದ ಸಾಂಸ್ಕೃತಿಕ ಹಿನ್ನೆಲೆ ಹಾಗೂ ಮೌಖಿಕ ಸಾಹಿತ್ಯದ ಕಲಾ ಮೀಮಾಂಸೆ **12**
ಆ) ಕನ್ನಡ ಮೌಖಿಕ ಸಾಹಿತ್ಯ ಮತ್ತು ಅದರ ಅಧ್ಯಯನದ ಇತಿಹಾಸ

**ಪಠ್ಯಗಳು :**

**ಘಟಕ.: 3**. ಅ) ಬೆಳಗಾವಿ ಜಿಲ್ಲೆಯ ಜನಪದ ಕಥೆಗಳು– ರಾಜಪ್ಪ **12**
ಆ) ಗರತಿಯ ಹಾಡು– ಸಂ. ಹಲಸಂಗಿ ಗೆಳೆಯರು

**ಘಟಕ.: 4** . ನಮ್ಮ ಸುತ್ತಿನ ನಂಬಿಕೆಗಳು: ಡಿ. ಕೆ. ರಾಜೇಂದ್ರ **10**

**ಘಟಕ.: 5** .ಅ) ಭೂತಾರಾಧನೆ: ಕೆ. ಚಿನ್ನಪ್ಪಗೌಡ **11**
ಆ) ಯಕ್ಷಗಾನ: ಕೆ. ಶಿವರಾಮ ಕಾರಂತ

**ಪರಾಮರ್ಶನ ಗ್ರಂಥಗಳು:**


1. ಉತ್ತರ ಕರ್ನಾಟಕದ ಜನಪದ ರಂಗಭೂಮಿ: ಚಂದ್ರಶೇಖರ ಕಂಬಾರ
2. ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ: ಡಿ.ಕೆ. ರಾಜೇಂದ್ರ
3. ಕರಪಾಳ ಮೇಳ: ಡಿ.ಕೆ. ರಾಜೇಂದ್ರ
4. ಕರ್ನಾಟಕ ಜನಪದ ಕಲೆಗಳ ಕೋಶ: ಹಿ.ಚಿ. ಬೋರಲಿಂಗಯ್ಯ (ಸಂ)
5. ಕರ್ನಾಟಕ ಜನಪದ ಕಲೆಗಳು: ಗೊ.ರು. ಚನ್ನಬಸಪ್ಪ
6. ಕನ್ನಡ ಜಾನಪದ ವಿಶ್ವಕೋಶ: (ಸಂ) ಚಂದ್ರಶೇಖರ ಕಂಬಾರ
7. ಮೌಖಿಕ ಕಥನ: ಜಿ.ಆರ್. ತಿಪ್ಪೇಸ್ವಾಮಿ
8. ಜಾನಪದ ಪರಿಭಾವನೆ: ಜಿ.ಆರ್. ತಿಪ್ಪೇಸ್ವಾಮಿ
9. ಜಾಗತೀಕರಣ ಮತ್ತು ಜಾನಪದ: ಜಿ.ಆರ್. ತಿಪ್ಪೇಸ್ವಾಮಿ
10. ಜಾನಪದ ಮತ್ತು ಚಲನಶೀಲತೆ: ಎಂ. ನಂಜಯ್ಯ ಹೊಂಗನೂರು
11. The Encylopaedia of Folk Culture of Karnataka: Krishna Murthy Hanur

## ಪ್ರಥಮ ಸೆಮಿಸ್ಟರ್ ಎಂ.ಎ ಕನ್ನಡ

| | |
|---|---|
| ಪತ್ರಿಕೆ: ಕನ್ನಡ ನಾಡು ನುಡಿ ಪ್ರಜ್ಞೆ ಹಾಗೂ ಸಾಂಸ್ಕೃತಿಕ ಚರಿತ್ರೆ | ಕೋರ್ಸ್ ಕೋಡ್ **DSC-5** |
| ಬೋಧನಾ ಅವಧಿ : ವಾರ ( L-T-P ): 4–0–0 | ನಂ. ಕ್ರೆಡಿಟ್ಸ್: 04 |
| ಅಂತರಿಕ ಮೌಲ್ಯಮಾಪನ : 30 ಅಂಕಗಳು | ಸೆಮಿಸ್ಟರ್ ಕೊನೆಯ ಪರೀಕ್ಷೆ: 70 ಅಂಕಗಳು |

- **Course Outcome (ಕೋರ್ಸ್ ಔಟ್‌ಕಮ್ಸ್)**
- ಪ್ರಸ್ತುತ ಯಾಂತ್ರಿಕ ಜಗತ್ತಿನಲ್ಲಿ ಕನ್ನಡದ ಪರಂಪರೆ, ಸಂಸ್ಕೃತಿಯ ಶ್ರೇಷ್ಠ ಅಂಶಗಳು ಕಣ್ಮರೆಯಾಗುತ್ತಿವೆ. ಸಂಸ್ಕೃತಿಯಲ್ಲಿ ಕಂಡುಬರುವ ಶ್ರೇಷ್ಠ ಮೌಲ್ಯಗಳು, ಆದರ್ಶಗಳು, ಅರಸರ ಸಾಧನೆಗಳು, ಸಾಂಸ್ಕೃತಿಕ ಕೇಂದ್ರಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿಕೊಡುವುದರ ಮೂಲಕ ವಿದ್ಯಾರ್ಥಿಗಳ ಜ್ಞಾನ ವಿಕಾಸಕ್ಕೆ ಸಹಕಾರಿಯಾಗಿದೆ.
- ಸಂಸ್ಕೃತಿಯ ಶೋಧಕರ ಪರಿಚಯವನ್ನು ಯುವಜನಾಂಗಕ್ಕೆ ಪರಿಚಯಿಸಿ ತನ್ಮೂಲಕ ಸತ್ಪ್ರಜೆಗಳನ್ನು ರೂಪಿಸಲು ಸಹಕಾರಿಯಾಗಿದೆ.
- ಕನ್ನಡ ನಾಡು–ನುಡಿ ಸಂಸ್ಕೃತಿಯನ್ನು ಕರಗತ ಮಾಡಿಕೊಂಡು ವಿದ್ಯಾರ್ಥಿಗಳಲ್ಲಿ ರಾಷ್ಟ್ರಾಭಿಮಾನ ಹಾಗೂ ದೇಶಭಕ್ತಿ ಮೂಡಿಸಲು ಸಹಕಾರಿಯಾಗಿದೆ.
- ಕನ್ನಡ ನಾಡು–ನುಡಿ–ಪ್ರಜ್ಞೆ , ಸಾಂಸ್ಕ್ರತಿಕ ಚರಿತ್ರೆ ಅಧ್ಯಯನದಿಂದ ನಾಡಿನ ವಾಸ್ತುಶಿಲ್ಪ, ಶಿಲ್ಪಕಲೆ, ಸಂಗೀತ, ನೃತ್ಯ ಚಿತ್ರಕಲೆ ಇತ್ಯಾದಿ ಜ್ಞಾನಶಾಖೆಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿ ಕೊಡಲು ಈ ಪತ್ರಿಕೆ ಸಹಕಾರಿಯಾಗಿದೆ.
- ಈ ಪತ್ರಿಕೆಯ ಅಧ್ಯಯನದಿಂದ ಅರಸು ಮನೆತನಗಳ ಕೊಡುಗೆ ವೀರಜೀವನದ ಆದರ್ಶಗಳು, ಸಾಮಾಜಿಕ ಪ್ರಜ್ಞೆ, ಮೌಲ್ಯಗಳು ಹಾಗೂ ತ್ಯಾಗ–ಬಲಿದಾನಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವಲ್ಲಿ ಸಹಕಾರಿಯಾಗಿದೆ.

**ಘಟಕ.: 1**. ಕನ್ನಡ ನಾಡು ನುಡಿ ಪ್ರಜ್ಞೆ ಹಾಗೂ ಸಾಂಸ್ಕೃತಿಕ ಚರಿತ್ರೆ– ಭಾಷೆ ಮತ್ತು ಸಂಸ್ಕೃತಿಯನ್ನು ಒಟ್ಟಾಗಿ ಅಧ್ಯಯನಿಸುವ ಸಂದರ್ಭ, ಕನ್ನಡ ರಾಷ್ಟ್ರೀಯತೆ, ಕನ್ನಡಿಗರ ಸಾಮ್ರಾಜ್ಯಶಾಹಿ ಧೋರಣೆ. **11**

**ಘಟಕ.: 2**. ಕನ್ನಡ ಸಂಸ್ಕೃತಿಗೆ ಕದಂಬ, ರಾಷ್ಟ್ರಕೂಟ, ಚಾಳುಕ್ಯ, ಗಂಗ, ಕಲಚೂರಿ, ಹೊಯ್ಸಳ, ವಿಜಯನಗರದ ಅರಸರು, ಬಹುಮನಿ ಸುಲ್ತಾನರು, ಮೈಸೂರು ಒಡೆಯರು ಮತ್ತು ಬ್ರಿಟೀಷರ ಕೊಡುಗೆಗಳು. **11**

**ಘಟಕ.: 3**. ಕರ್ನಾಟಕದಲ್ಲಿ ಆಗಿ ಹೋದ ಪ್ರಮುಖ ಧರ್ಮಗಳು – ಜೈನ, ಬೌದ್ಧ, ವೈದಿಕ, ವೀರಶೈವ, ಇಸ್ಲಾಂ ಹಾಗೂ ಕ್ರೈಸ್ತ ಧರ್ಮಿಯರ ಸಾಂಸ್ಕೃತಿಕ ಕೊಡುಗೆಗಳು. **12**

**ಘಟಕ.: 4**. ಕರ್ನಾಟಕದ ಏಕೀಕರಣ ಪೂರ್ವದ, ಏಕೀಕರಣ ಹಂತದ ಹಾಗೂ ಏಕೀಕರಣೋತ್ತರ ಸಂದರ್ಭದಲ್ಲಿ ಕರ್ನಾಟಕ ರಾಜ್ಯವು ಎದುರಿಸಿದ ಹಾಗೂ ಎದುರಿಸುತ್ತಿರುವ ಆರ್ಥಿಕ, ಔದ್ಯೋಗಿಕ, ಶೈಕ್ಷಣಿಕ, ಸಾಮಾಜಿಕ, ಭಾಷಿಕ ಹಾಗೂ ಜಾನಾಂಗಿಕ ಸವಾಲುಗಳು. **11**

**ಘಟಕ.: 5**. ಕನ್ನಡ ನಾಡಿನ ಐದು ಪರಂಪರೆಯ ತಾಣಗಳನ್ನು ಸಂದರ್ಶಿಸಿ 10 ಪುಟಗಳ ಟಿಪ್ಪಣಿಯನ್ನು ವಿದ್ಯಾರ್ಥಿಗಳು ಕ್ಷೇತ್ರಕಾರ್ಯದ ವರದಿಯನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. **11**

**ಪರಾಮರ್ಶನ ಗ್ರಂಥಗಳು:**


1. ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ ಭಾಗ–1, ಭಾಗ–2– ಡಾ. ಶಂಬಾ ಜೋಶಿ
2. ಕರ್ನಾಟಕ ಸಂಸ್ಕೃತಿ ಸಮಿಕ್ಷೆ– ಡಾ. ಎಚ್. ತಿಪ್ಪೇರುದ್ರಸ್ವಾಮಿ
3. ಕರ್ನಾಟಕ ಪರಂಪರೆ– ಭಾಗ–1, ಭಾಗ–2
4. ಕರ್ನಾಟಕ ಸಂಸ್ಕೃತಿಗೆ ಗಂಗ ದೊರೆಗಳ ಕೊಡುಗೆ. ಡಾ. ಕೆ. ಎಸ್. ಶಿವಪ್ರಕಾಶ
5. ಕರ್ನಾಟಕ ಸಂಗಾತಿ– ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು
6. ನಾಡು ನುಡಿಯ ರೂಪಕ– ಶಿವರಾಂ ಪಡಿಕ್ಕಲ್, ಪ್ರ. ಮಂಗಳೂರ ವಿಶ್ವವಿದ್ಯಾಲಯ

## ಪ್ರಥಮ ಸೆಮಿಸ್ಟರ್ ಎಂ.ಎ ಕನ್ನಡ

| | |
|---|---|
| ಪತ್ರಿಕೆ: ಕೌಶಲ್ಯ : ಭಾಷಾಂತರ | ಕೋರ್ಸ್ ಕೋಡ್ 6SEC-1 |
| ಬೋಧನಾ ಅವಧಿ : ವಾರ ( L-T-P ): 4–0–0 | ನಂ. ಕ್ರೆಡಿಟ್ಸ್: 04 |
| ಅಂತರಿಕ ಮೌಲ್ಯಮಾಪನ : 20 ಅಂಕಗಳು | ಸೆಮಿಸ್ಟರ್ ಕೊನೆಯ ಪರೀಕ್ಷೆ: 30 ಅಂಕಗಳು |

## Course Outcome (ಕೋರ್ಸ್ ಔಟ್‌ಕಮ್ಸ್)

- ಭಾಷಾಂತರ– ಸ್ವರೂಪ, ವ್ಯಾಪ್ತಿ ಇತಿಹಾಸ, ಭಾಷಾಂತರ–ಲಿಪ್ಯಂತರಗಳ ಅಂತರ ವ್ಯತ್ಯಾಸ ತಿಳಿಯಲು ಈ ಪತ್ರಿಕೆ ಸಹಕಾರಿಯಾಗಿದೆ.
- ಭಾಷಾಂತರದ ಸಾಂಸ್ಕೃತಿಕ ಸಂಗತಿಗಳನ್ನು ಮತ್ತು ಸಮಸ್ಯೆಗಳನ್ನು ಅರಿಯಲು ಈ ಪತ್ರಿಕೆಯಿಂದ ಸಾಧ್ಯವಾಗುತ್ತದೆ.
- ಈ ಪತ್ರಿಕೆಯ ಅಧ್ಯಯನ ಮಾಡುವುದರಿಂದ ವಿದ್ಯಾರ್ಥಿಗಳ ಬೌದ್ಧಿಕ ವಿಕಾಸವಾಗುವುದರೊಂದಿಗೆ ವಿವಿಧ ಭಾಷೆಗಳಿಂದ ಬಂದಂತಹ ಜ್ಞಾನವನ್ನು ಅರಿತು ಕೊಳ್ಳಲು ಸಹಕಾರಿಯಾಗಿದೆ.
- ಭಾಷಾಂತರ ಕಲೆಯಿಂದ ವಿದ್ಯಾರ್ಥಿಗಳು ಬೇರೆ ಬೇರೆ ಭಾಷೆಗಳ ಜ್ಞಾನವನ್ನು ತಿಳಿದುಕೊಂಡು ಹೊಸ ಹೊಸ ಆವಿಷ್ಕಾರಗಳಿಗೆ ತನ್ನ ಜ್ಞಾನವನ್ನು ತೆರದಿಡಲು ಸಹಕಾರಿಯಾಗಿದೆ.
- ಈ ಪತ್ರಿಕೆಯ ಅಧ್ಯಯನ ಮಾಡುವುದರಿಂದ ವಿದ್ಯಾರ್ಥಿಗಳು ಕ್ಲಿಷ್ಟವಾದ ವಿಷಯಗಳನ್ನು ಸುಲಭವಾಗಿ ತಿಳಿಸಲು ಸಹಕಾರಿಯಾಗಿದೆ.

ಈ ಪತ್ರಿಕೆಯಿಂದ ಉತ್ತಮ ಅನುವಾದಕರಾಗಲು ವಿದ್ಯಾರ್ಥಿಗಳಿಗೆ ಪ್ರೇರಣೆಯನ್ನು ಒದಗಿಸಲು ಸಹಕಾರಿಯಾಗಿದೆ.

- ಅನ್ಯಭಾಷೆ, ಜನಾಂಗ, ಸಾಹಿತ್ಯ, ಸಂಸ್ಕೃತಿಯ ಬಗೆಗೆ ವಿದ್ಯಾರ್ಥಿಗಳಲ್ಲಿ ಗೌರವ ಭಾವವನ್ನು ಮೂಡಿಸುತ್ತದೆ.

| | |
|---|---|
| **ಘಟಕ.: 1**. ಭಾಷಾಂತರ– ಸ್ವರೂಪ, ವ್ಯಾಪ್ತಿ: ವಿವಿಧ ವ್ಯಾಖ್ಯೆಗಳು | **12** |
| **ಘಟಕ.: 2**. ಭಾಷಾಂತರದ ಇತಿಹಾಸ, ಭಾಷಾಂತರ–ಲಿಪ್ಯಂತರಗಳ ಅಂತರ/ ವ್ಯತ್ಯಾಸ | **10** |
| **ಘಟಕ.: 3**. ಕನ್ನಡದಲ್ಲಿ ಭಾಷಾಂತರ ಇತಿಹಾಸ, ಇಂದಿನ ಪ್ರವೃತ್ತಿ | **11** |
| **ಘಟಕ.: 4**. ಭಾಷಾಂತರ– ಸಾಂಸ್ಕೃತಿಕ ಸಂಗತಿಗಳು | **10** |
| **ಘಟಕ.: 5**. ಭಾಷಾಂತರ (ಸಾಹಿತ್ಯಿಕ–ಮಾಧ್ಯಮ): ಸಮಸ್ಯೆಗಳು– ಪ್ರಾಯೋಗಿಕ ಇಂಗ್ಲೀಷ–ಕನ್ನಡ ಅನುವಾದ | **12** |

**ಪರಾಮರ್ಶನ ಗ್ರಂಥಗಳು:**


1. ಅನುಶೀಲನ: ಪ್ರಧಾನ್ ಗುರುದತ್
2. ಭಾಷಾಂತರ ಕಲೆ: ಪ್ರಧಾನ್ ಗುರುದತ್
3. ಭಾಷಾಂತರದ ಸಾಂಸ್ಕೃತಿಕ ನೆಲೆಗಳು : ಕರೀಗೌಡ ಬೀಚನಹಳ್ಳಿ (ಸಂ), ಕನ್ನಡ ವಿವಿ., ಹಂಪಿ
4. ಭಾಷಾಂತರ ಪ್ರಕ್ರಿಯೆ: ಡಾ. ಮೋಹನ್ ಕುಂಟಾರ್
5. ಭಾಷಾಂತರ ಪ್ರವೇಶಿಕೆ: ಉಷಾ ಎಂ., ಕನ್ನಡ ವಿವಿ., ಹಂಪಿ
6. ವಸಹಾತುಶಾಹಿ ಮತ್ತು ಭಾಷಾಂತರ: ತಾರಕೇಶ್ವರ ವಿ.ಬಿ., ಕನ್ನಡ ವಿವಿ., ಹಂಪಿ
7. ಆಧುನಿಕಪೂರ್ವ ಕನ್ನಡ ಕೃತಿಗಳ ಇಂಗ್ಲೀಷ ಭಾಷಾಂತರ: ಓ.ಎಲ್. ನಾಗಭೂಷಣಸ್ವಾಮಿ
8. ಭಾಷಾಂತರ: ಓ.ಎಲ್. ನಾಗಭೂಷಣಸ್ವಾಮಿ, ಕನ್ನಡ ವಿವಿ., ಹಂಪಿ
9. ಇಂಗ್ಲೀಷ ಗೀತೆಗಳ ಪೂರ್ವದ ಭಾಷಾಂತರ: ಡಾ. ಗಜಾನನ ನಾಯ

## ಪ್ರಥಮ ಸೆಮಿಸ್ಟರ್ ಎಂ.ಎ ಕನ್ನಡ

| | |
|---|---|
| ಪತ್ರಿಕೆ: ಕೌಶಲ್ಯ : ಸಾಹಿತ್ಯ ವಿಮರ್ಶೆ | ಕೋರ್ಸ್ ಕೋಡ್ DSCT |
| ಬೋಧನಾ ಅವಧಿ : ವಾರ ( L-T-P ): 4–0–0 | ನಂ. ಕ್ರೆಡಿಟ್ಸ್: 02 |
| ಅಂತರಿಕ ಮೌಲ್ಯಮಾಪನ : 20 ಅಂಕಗಳು | ಸೆಮಿಸ್ಟರ್ ಕೊನೆಯ ಪರೀಕ್ಷೆ: 30 ಅಂಕಗಳು |

- **Course Outcome (ಕೋರ್ಸ್ ಔಟ್‌ಕಮ್ಸ್)**
- ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿರುವ ಜೀವನಾನುಭವಗಳನ್ನು ಅರ್ಥಮಾಡಿಕೊಳ್ಳುವ ವಿಶೇಷವಾದ ಅರಿವು ಮುಖ್ಯವಾಗುತ್ತದೆ. ಈ ಪತ್ರಿಕೆಯು ಅಂತಹ ಅವಶ್ಯಕತೆಯನ್ನು ರೂಢಿಗತಗೊಳಿಸುವಲ್ಲಿ ಸಹಾಯಕವಾಗಿದೆ

- ಈ ಪತ್ರಿಕೆಯಿಂದ ಜಾಗತಿಕ ಮಟ್ಟದಲ್ಲಿ ಸಾಹಿತ್ಯದ ಮೂಲಕ ಸಮಾಜವನ್ನು ಅರ್ಥಮಾಡಿಕೊಳ್ಳಲು ಇರುವ ದಾರಿಗಳನ್ನು ವಿದ್ಯಾರ್ಥಿಗಳು ಅರಿಯಬಹುದಾಗಿದೆ.

- ಈ ಪತ್ರಿಕೆಯು ಸಮಾಜದಲ್ಲಿ ಇರುವ ಮೂಢನಂಬಿಕೆ, ಕಂದಾಚಾರ ಮತ್ತು ದೌರ್ಜನ್ಯದಂತಹ ದೌರ್ಜನ್ಯದಂತಹ ಘಟನೆಗಳನ್ನು ಅರಿವಿಗೆ ತಂದು ಸಮ ಸಮಾಜದ ಪರಿಕಲ್ಪನೆಯನ್ನು ಮೂಡಿಸುತ್ತದೆ.

ಅನೇಕ ಚಿಂತಕರು ಸಾಹಿತ್ಯ ಕೃತಿಯನ್ನು ಗ್ರಹಿಸಿಕೊಳ್ಳಲು ಹೇಳಿರುವ ಮಾನದಂಡಗಳನ್ನು ಅರಿಯಬಹುದು. ಇದರೊಂದಿಗೆ ಸಾಹಿತ್ಯ ಎನ್ನುವುದು ಸಮಾಜದ ಚಿಕಿತ್ಸಕ ಮನೋಭಾವವನ್ನು ಮೂಡಿಸಲು ಈ ಪತ್ರಿಕೆಯ ಮೂಲಕ ವಿದ್ಯಾರ್ಥಿಗಳಿಗೆ ಮನನ ಮಾಡಿಕೊಡಬಹುದು.

**ಪ್ರಾಯೋಗಿಕ ಕನ್ನಡ**

| | | | |
|---|---|---|---|
| ಘಟಕ.: 1. ಕಾವ್ಯ | : ನೀಲಾಂಜನೆಯ ನೃತ್ಯ ಪ್ರಸಂಗ ಆದಿಪುರಾಣ | ಆದಿಕವಿ ಪಂಪ | 09 |
| | : ಶಿಲಾಬಾಲಿಕೆ ನುಡಿದಳು ಪಾಟೀಲ್ ಪುಟ್ಟಪ್ಪ | | 09 |
| | : ಶ್ರೀ ಚಂದ್ರಶೇಖರ ಕಂಬಾರ | | 09 |